# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 26(65) |
| ಮಾನ್ಯ ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 04.12.2023 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮೆದುಳು ಜ್ವರಕ್ಕೆ ಲಸಿಕೆ ನೀಡುವ ಅಭಿಯಾನವನ್ನು ರಾಜ್ಯದಲ್ಲಿ ಆರಂಭಿಸಲಾಗಿದೆಯೇ; ಆರಂಭಿಸಿದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಎಂದಿನಿಂದ ಲಸಿಕೆ ನೀಡುವ ಅಭಿಯಾನವನ್ನು ಆರಂಭಿಸಲಾಗಿದೆ; (ವಿವರ ನೀಡುವುದು) | ಮೆದುಳು ಜ್ವರಕ್ಕೆ ಲಸಿಕೆ ನೀಡುವ ಅಭಿಯಾನವನ್ನು ರಾಜ್ಯದಲ್ಲಿ 2007ರಲ್ಲಿ ವಿಜಯಪುರ, ರಾಯಚೂರು, ಕೊಪ್ಪಳ, ಧಾರವಾಡ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ ಮತ್ತು ಬಳ್ಳಾರಿಯಲ್ಲಿ ತದನಂತರ 2013ರಲ್ಲಿ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಜೆಇ ಲಸಿಕಾ ಅಭಿಯಾನವನ್ನು ನಡೆಸಲಾಯಿತು.<br><br>ನಂತರ ಈ 10 ಜಿಲ್ಲೆಗಳಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ ಜಪಾನೀಸ್ ಎನ್‌ಸೆಫಲೈಟಿಸ್ (ಜೆಇ) ಲಸಿಕೆಯನ್ನು ಹುಟ್ಟಿದ ಎಲ್ಲಾ ಮಕ್ಕಳಿಗೆ 2 ಡೋಸ್ ನಂತೆ ನೀಡಲಾಗುತ್ತಿದೆ. ಮೊದಲನೇ ಡೋಸ್ ಅನ್ನು 9-12 ನೇ ತಿಂಗಳಲ್ಲಿ ಹಾಗೂ 2ನೇ ಡೋಸ್ ಅನ್ನು 16-23 ನೇ ತಿಂಗಳಲ್ಲಿ ನೀಡಲಾಗುತ್ತಿದೆ.<br><br>ಮುಂದುವರೆದು, ಡಿಸೆಂಬರ್ 2022 ಮತ್ತು ಜನವರಿ 2023 ರಲ್ಲಿ 1-15 ವರ್ಷದ ಮಕ್ಕಳಿಗೆ ಬಾಗಲಕೋಟೆ, ದಕ್ಷಿಣಕನ್ನಡ, ಗದಗ, ಕಲಬುರ್ಗಿ, ಹಾಸನ, ಹಾವೇರಿ, ರಾಮನಗರ, ತುಮಕೂರು, ಉಡುಪಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಜೆಇ ಲಸಿಕಾ ಅಭಿಯಾನವನ್ನು ನಡೆಸಲಾಗಿದ್ದು, ಒಟ್ಟು ಈ 20 ಜಿಲ್ಲೆಗಳಲ್ಲಿ ಜೆಇ ಲಸಿಕೆಯನ್ನು ಅರ್ಹ ಮಕ್ಕಳಿಗೆ ಎರಡು ಡೋಸ್ ನಂತೆ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ ಉಚಿತವಾಗಿ ನೀಡಲಾಗುತ್ತಿದೆ. |
| ಆ | ಈ ಮೆದುಳು ಜ್ವರಕ್ಕೆ ಲಸಿಕೆ ನೀಡುವ ಅಭಿಯಾನವನ್ನು ನಡೆಸಲು ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; ಈ ಲಸಿಕೆಯಿಂದ ಆಗುವ ಅನುಕೂಲಗಳೇನು? (ವಿವರ ನೀಡುವುದು) | ಮೆದುಳು ಜ್ವರಕ್ಕೆ ಜೆಇ ಲಸಿಕೆ ನೀಡುವ ಅಭಿಯಾನವನ್ನು ಆರೋಗ್ಯ ಇಲಾಖೆಯ ಸಿಬ್ಬಂದಿಗೆ ತರಬೇತಿ, ಅರ್ಹ ಮಕ್ಕಳ ತಲೆ ಏಣಿಕೆ ಸಮೀಕ್ಷೆ (Head count Survey) ಮತ್ತು ಪಟ್ಟಿ ಮಾಡುವಿಕೆ, ಸೂಕ್ಷ್ಮ ಕ್ರಿಯಾಯೋಜನೆ ತಯಾರಿಕೆ, ಪತ್ರಿಕಾಗೋಷ್ಠಿ, ಐಇಸಿ ಚಟುವಟಿಕೆಗಳು, ರಾಜ್ಯ ಚಾಲನಾ ಸಮಿತಿ ಸಭೆ, ರಾಜ್ಯ ಲಸಿಕಾ ಟಾಸ್ಕ್ ಫೋರ್ಸ್ ಸಮಿತಿ ಸಭೆ, ಜಿಲ್ಲಾ ಟಾಸ್ಕ್ ಫೋರ್ಸ್ ಸಭೆ, ತಾಲ್ಲೂಕು ಟಾಸ್ಕ್ ಫೋರ್ಸ್ ಸಭೆ, ಇತರ ಇಲಾಖೆಗಳ ಸಹಕಾರ, ಬೆಂಬಲ, ಮೌಲ್ಯಮಾಪನ ಹಾಗೂ ವರದಿ ಸಲ್ಲಿಸುವಿಕೆಯಂತಹ ಚಟುವಟಿಕೆ/ಕಾರ್ಯಕ್ರಮವನ್ನು ಕೈಗೊಳ್ಳುವ ಮೂಲಕ ಹಮ್ಮಿಕೊಳ್ಳಲಾಗಿದೆ.<br><br>ಮೆದುಳು ಜ್ವರ ಖಾಯಿಲೆಗೆ ಜಪಾನೀಸ್ ಎನ್‌ಸೆಫಲೈಟಿಸ್ (ಜೆಇ) ಒಂದು ಮುಖ್ಯ ಕಾರಣವಾಗಿದ್ದು, ಈ ವೈರಾಣು |

| | | |
|---|---|---|
| | | ಕ್ಯೂಲೆಕ್ಸ್ ಸೊಳ್ಳೆಗಳ ಮೂಲಕ ಹರಡುತ್ತದೆ ಇದನ್ನು ಜಪಾನೀಸ್ ಎನ್‌ಸೆಫಲೈಟಿಸ್ (ಜೆಇ) ಲಸಿಕೆ ನೀಡುವ ಮುಖಾಂತರ ತಡೆಗಟ್ಟಲು ಅನುಕೂಲವಾಗಿದೆ. |

**ಆಕುಕ 68 ಎಸ್‌ಎಂಎಂ 2023**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಸಚಿವರು**